# ಕರ್ನಾಟಕ ವಿಧಾನ ಪರಿಷತ್ತು.

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 571 |
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 11–07–2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

********

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| 1 | ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಗಳ ನಡುವೆ/ ಪಕ್ಕದಲ್ಲಿ ಬರುವ ಹಂಚಿಕೆಗೆ ಯೋಗ್ಯವಲ್ಲದ ತುಂಡು ನಿವೇಶನ (ಬಿಟ್ ಆಫ್ ಲ್ಯಾಂಡ್) ಹಂಚಿಕೆಯನ್ನು ಸುತ್ತೋಲೆ ಮೂಲಕ ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| 2 | ಈ ರೀತಿ ಹಂಚಿಕೆ ತಡೆಹಿಡಿಯಲು ಕಾರಣಗಳೇನು; (ಪೂರ್ಣ ವಿವರಗಳೊಡನೆ ಮಾಹಿತಿ ನೀಡುವುದು) | ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ರನ್ವಯ ತುಂಡು ಭೂಮಿ ಹಂಚಿಕೆಗೆ ಯಾವುದೇ ಅವಕಾಶವಿರುವುದಿಲ್ಲ. ಆದುದರಿಂದ, ಸರ್ಕಾರದ ಪತ್ರ ಸಂಖ್ಯೆ: ನಅಇ 103 ಮೈಅಪ್ರಾ 2018 ದಿನಾಂಕ:23.04.2021 ಮತ್ತು ಪತ್ರ ಸಂಖ್ಯೆ: ನಅಇ 71 ಮೈಅಪ್ರಾ 2023 ದಿನಾಂಕ: 14–03–2023 ಗಳಲ್ಲಿ ತುಂಡು ಭೂಮಿ ಹಂಚಿಕೆ ಮಾರ್ಗಸೂಚಿ ಸಿದ್ಧಪಡಿಸುವವರೆಗೆ ತುಂಡು ಭೂಮಿ ಹಂಚಿಕೆ ಪ್ರಕರಣಗಳಲ್ಲಿ ಯಾವುದೇ ನಿರ್ಣಯ ಕೈಗೊಳ್ಳದಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ನಿರ್ದೇಶನ ನೀಡಲಾಗಿರುತ್ತದೆ. |
| 3 | ತುಂಡು ನಿವೇಶನ ಹಂಚಿಕೆ ತಡೆಯಿಡಿದಿರುವುದರಿಂದ ಪ್ರಾಧಿಕಾರಕ್ಕೆ ಆರ್ಥಿಕ ನಷ್ಟ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ತುಂಡು ನಿವೇಶನ ಹಂಚಿಕೆ ಕುರಿತಂತೆ ಮಾರ್ಗಸೂಚಿ ರಚಿಸುವ ಕಾರ್ಯವು ಪ್ರಗತಿಯಲ್ಲಿದ್ದು, ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:12.06.2023ರಂದು ವಿವಿಧ ಪ್ರಾಧಿಕಾರಗಳೊಂದಿಗೆ ಸಭೆಯನ್ನು ನಡೆಸಿದ್ದು, ಮಾರ್ಗಸೂಚಿ ರಚಿಸಲು ಸಲಹೆ/ಮಾಹಿತಿ ಸಲ್ಲಿಸುವಂತೆ ಪ್ರಾಧಿಕಾರಗಳ ಆಯುಕ್ತರಿಗೆ ತಿಳಿಸಲಾಗಿರುತ್ತದೆ.<br><br>ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ ರವರಿಂದ ಪ್ರಸ್ತಾವನೆ ಸ್ವೀಕೃತವಾದ ನಂತರ ಮಾರ್ಗಸೂಚಿಯನ್ನು ಅಂತಿಮಗೊಳಿಸಲು ಸರ್ಕಾರದ ಹಂತದಲ್ಲಿ ಕ್ರಮವಹಿಸಲಾಗುವುದು. |
| 4 | ತುಂಡು ನಿವೇಶನಗಳನ್ನು ಸಾರ್ವಜನಿಕ ಅನಧಿಕೃತವಾಗಿ ಬಳಕೆ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| 5 | ತುಂಡು ನಿವೇಶನ ಹಂಚಿಕೆ ಸಂಬಂಧ ಸರ್ಕಾರ ನಿಯಮ ರೂಪಿಸುವುದೇ; ಹಾಗಿದ್ದಲ್ಲಿ, ಅದರ ರೂಪರೇಷೆಗಳೇನು; | |
| 6 | ಯಾವ ಕಾಲಮಿತಿಯಲ್ಲಿ ತುಂಡು ನಿವೇಶನ ಹಂಚಿಕೆಗೆ ಸರ್ಕಾರ ಅನುಮತಿ ನೀಡಲಾಗುವುದು? | |

ಸಂಖ್ಯೆ:ನಅಇ 189 ಮೈಅಪ್ರಾ 2023(ಇ)

(ಬಿ.ಎಸ್.ಸುರೇಶ)
ನಗರಾಭಿವೃದ್ಧಿ ಮತ್ತು ನಗರ
ಯೋಜನೆ ಸಚಿವರು